

ನಿದ್ದೆಯನ್ನೇ ಮಾಡುವುದಿಲ್ಲ. ಈಗಲೂ ನೋಡಿ, ಬ್ರೇಕ್‌ಫಾಸ್ಟನ್ನೂ ಮಾಡದೇ ಹೇಗೆ ಕಣ್ಣು ಕೆಂಪಗೆ ಮಾಡಿಕೊಂಡು ಕುಳಿತು ಬಿಟ್ಟಿದ್ದಾನೆ."

"ಯಾಕ್ರೀ ಬಾಸ್?" ಎಂದು ನಾನು ಬಾಸಿಯ ಕತ್ತಿನಲ್ಲಿ ಕೈಯ್ಯಾಡಿಸಿ ಹಣೆಗೆ ಹಣೆ ತಾಗಿಸಿದೆ. ಅವನು ಎಂದಿನಂತೆ ಖುಷಿಯನ್ನು ಪ್ರಕಟಿಸದೇ ತನ್ನ ಹೆಸರಿಗೆ ತಕ್ಕಂತೆ ಗಂಭೀರವಾಗಿ ಕುಳಿತು ಹೊಟ್ಟೆಯಿಂದಲೇ ಗ್ರ್... ಎಂದು ಸದ್ದು ತೆಗೆದಾಗ ಹಿಂಜರಿದೆ. "ಮಾಕೋನಿಗೆ ಅದ್ಯಾವುದೋ ಅಸೈನ್‌ಮೆಂಟಿನ ಡೆಡ್‌ಲೈನ್ ಇತ್ತಂತೆ ನಿನ್ನೆ. ಸ್ನೇಹಿತನ ಮನೆಯಲ್ಲಿ ಇಬ್ಬರೂ ಡಿಸ್ಕಸ್ ಮಾಡಿ ಬಿಡಿಸುತ್ತೇವೆ ಅಂತ ಹೇಳಿದ್ದ. ಹಾಗೇ ಸ್ವಲ್ಪ ತಡವಾಯ್ತೇನೋ."